Agri Newspaper Clippings
UASB Library
Jai Kisan

MONDAY 30.06.2025 Pg.01

vittasuggi@gmail.com


ವಿತ್ತವಾಣಿ

ಮನೆ ಮನೆಯ ಮನಿಮಾತು

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » BENGALURU
6
ಸೋಮವಾರ
30 ಜೂನ್ 2025
30 JUNE 2025



ಭಾರತ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಅಧೀನದ 'ಕಾಫಿ ಮಂಡಳಿ' ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಾಫಿಗಿರುವ ಬೇಡಿಕೆ, ಬೆಳೆಯ ಸ್ಥಿತಿಗತಿ, ರಫ್ತು, ಮಾರುಕಟ್ಟೆ, ತಂತ್ರಜ್ಞಾನ, ಸಂಶೋಧನೆ ಮತ್ತು ಗುಣಮಟ್ಟ ಸುಧಾರಣೆ ಸೇರಿ ಇತ್ಯಾದಿ ಅಂಶಗಳನ್ನು ತೆರೆದಿಟ್ಟಿದೆ. ಮಾಧ್ಯಮ ಪ್ರತಿನಿಧಿಗಳ ಪ್ರವಾಸದಲ್ಲಿ ಈ ಕುರಿತು ಹಲವು ಪ್ರಮುಖ ಮಾಹಿತಿ ಹಂಚಿಕೊಂಡಿದ್ದು, ಅದರ ಸಂಕ್ಷಿಪ್ತ ವರದಿ ಇಲ್ಲಿದೆ.



ವಿಶ್ವ ವ್ಯಾಪಿ ಭಾರತದ ಕಾಫಿ

■ ಹರೀಶ್ ಬೇಲೂರು ಮಡಿಕೇರಿ

ಚಹಾಕ್ಕೆ ಪ್ರಸಿದ್ಧಿಯಾಗಿರುವ ಭಾರತ, ಇದೀಗ ಕಾಫಿಯನ್ನು ಜಗತ್ತಿನೆಲ್ಲೆಡೆ ಪಸರಿಸುತ್ತಿದ್ದು, ಕಾಫಿ ಉದ್ಯಮದ ದಿಗ್ಗಜ ರಾಷ್ಟ್ರಗಳಿಗೆ ಸೆಡ್ಡು ಹೊಡೆಯುತ್ತಿದೆ. 2024-25ರಲ್ಲಿ 3.63 ಲಕ್ಷ ಮೆ.ಟನ್ ಉತ್ಪಾದಿಸಿದ್ದು, 3.90 ಲಕ್ಷ ಮೆ.ಟನ್ ರಫ್ತು ಮಾಡಿದೆ. ಈ ಮೂಲಕ 15,618 ಕೋಟಿ ರೂ. ವಹಿವಾಟು ನಡೆಸಿದೆ. 2023-24ಕ್ಕೆ ಹೋಲಿಸಿದರೆ 2024-25ರಲ್ಲಿ ರಫ್ತು ಪ್ರಮಾಣ ಶೇ.40.20 ಹೆಚ್ಚಳವಾಗಿದೆ. 2023-24ರಲ್ಲಿ 3.60 ಲಕ್ಷ ಮೆ.ಟನ್ ಉತ್ಪಾದನೆಯಾಗಿತ್ತು.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತದ ಕಾಫಿಗೆ ಹೆಚ್ಚು ಬೇಡಿಕೆ ಇದೆ. ಜಗತ್ತಿನಲ್ಲಿ ಅತಿ ಹೆಚ್ಚು ಕಾಫಿ ಬೆಳೆಯುವ ರಾಷ್ಟ್ರಗಳ ಪೈಕಿ ಬ್ರೆಜಿಲ್ ಮೊದಲ ಸ್ಥಾನದಲ್ಲಿದೆ. ವಿಯೆಟ್ನಾಂ 2ನೇ ರಾಷ್ಟ್ರವಾಗಿದೆ. ನಂತರದ ಸ್ಥಾನಗಳಲ್ಲಿ ಕೊಲಂಬಿಯಾ, ಇಂಡೋನೇಷ್ಯಾ, ಇಥಿಯೋಪಿಯಾ, ಉಗಾಂಡ, ಭಾರತ ಇವೆ. ಒಟ್ಟಾರೆ ಜಾಗತಿಕ ಕಾಫಿ ಬೆಳೆಯ 3ನೇ 1 ಭಾಗದಷ್ಟು ಅಂದರೆ ಶೇ.40 ಕಾಫಿ ಬೆಳೆಯನ್ನು ಬ್ರೆಜಿಲ್ ಬೆಳೆಯುತ್ತಿದೆ. ರಫ್ತಿನಲ್ಲೂ ಆ ದೇಶ ಅಗ್ರಸ್ಥಾನದಲ್ಲಿದ್ದು, ಶೇ.50ಕ್ಕಿಂತ ಅಧಿಕ ರಫ್ತು ಮಾಡುತ್ತಿದೆ. ರಫ್ತಿನಲ್ಲಿ ನಂತರದ ಸ್ಥಾನಗಳನ್ನು ವಿಯೆಟ್ನಾಂ, ಕೊಲಂಬಿಯಾ, ಇಂಡೋನೇಷ್ಯಾ, ಭಾರತ ಪಡೆದುಕೊಂಡಿವೆ. ಯುರೋಪಿಯನ್ ಒಕ್ಕೂಟದ ದೇಶಗಳಲ್ಲಿ ಅರಣ್ಯೀಕರಣ ನೀತಿ ಬದಲಾದ ಕಾರಣ ಭಾರತದ ಕಾಫಿಗೆ ಹೆಚ್ಚಿನ ಬೇಡಿಕೆ ಬಂದಿದೆ. ಆ ರಾಷ್ಟ್ರಗಳಿಗೆ ಶೇ.46 ಕಾಫಿ ರಫ್ತು ಮಾಡಲಾಗುತ್ತಿದೆ. ಇಟಲಿ, ಜರ್ಮನಿ, ಬೆಲ್ಜಿಯಂ, ರಷ್ಯಾ ದೊಡ್ಡ ಮಾರುಕಟ್ಟೆಯಾಗಿವೆ. ಈ ಮೂಲಕ ಭಾರತದ ಕಾಫಿಯನ್ನು 'ಅಂತಾರಾಷ್ಟ್ರೀಯ ಬ್ರ್ಯಾಂಡ್' ಮಾಡುವತ್ತ ಮಂಡಳಿ ದಾಪುಗಾಲು ಇಟ್ಟಿದೆ.

ಮಂಡಳಿ ಕಾರ್ಯವೈಖರಿ?: 1940ರಲ್ಲಿ 2ನೇ ಮಹಾಯುದ್ಧ ಕಾರಣದಿಂದ ಭಾರತದಲ್ಲಿ ಕಾಫಿ ಉದ್ಯಮ ಸಂಕಷ್ಟ ಸ್ಥಿತಿಯಲ್ಲಿತ್ತು. 1942ರಲ್ಲಿ ಸಾಂವಿಧಾನಿಕ ಕಾಯ್ದೆ ಮೂಲಕ ಭಾರತ ಸರ್ಕಾರವು, ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಅಡಳಿತ ನಿಯಂತ್ರಣದಲ್ಲಿ 'ಕಾಫಿ ಮಂಡಳಿ' ಸ್ಥಾಪಿಸಿತ್ತು. ಕಾಫಿ ಉದ್ಯಮಕ್ಕೆ ಮಾರುಕಟ್ಟೆ, ಹಣಕಾಸು, ಸಂಶೋಧನೆ ಮತ್ತು ಅಭಿವೃದ್ಧಿ ಕ್ಷೇತ್ರಗಳಲ್ಲಿ ಬೆಂಬಲ ನೀಡುವ ಜವಾಬ್ದಾರಿಯನ್ನು ಮಂಡಳಿಗೆ ವಹಿಸಲಾಗಿತ್ತು. ಕಾಫಿ ಮಂಡಳಿಯು 1946ರಲ್ಲಿ 'ಮೈಸೂರು ಕಾಫಿ ಪ್ರಯೋಗ ಕೇಂದ್ರ'ದ ಅಡಳಿತ ವಹಿಸಿಕೊಂಡಿತ್ತು. ಆದನ್ನು 'ಕೇಂದ್ರ ಕಾಫಿ ಸಂಶೋಧನಾ ಸಂಸ್ಥೆ' ಎಂದು ಮರುನಾಮಕರಣ ಮಾಡಲಾಗಿತ್ತು. ಬೆಂಗಳೂರಿನ ಅಂಬೇಡ್ಕರ್ ವೀದಿ ರಸ್ತೆಯಲ್ಲಿರುವ ಮಂಡಳಿ ಪ್ರಧಾನ ಕಚೇರಿಯಲ್ಲಿ ಗುಣಮಟ್ಟ ನಿಯಂತ್ರಣ ವಿಭಾಗ, ಕೇಂದ್ರ ಕಾಫಿ ಸಂಶೋಧನೆ ಸಂಸ್ಥೆ, ಸಂಶೋಧನಾ ವಿಭಾಗ, ಬೆಳೆಗಾರರಿಗೆ ತಂತ್ರಜ್ಞಾನದ ಪ್ರಸರಣ ಮತ್ತು ತರಬೇತಿ ಸೇರಿ ಇತರ ವಿಭಾಗಗಳಿವೆ. ಅಲ್ಲದೆ, ಗುಣಮಟ್ಟ ನಿಯಂತ್ರಣ ವಿಭಾಗ, ಕಪ್‌ನಲ್ಲಿ ಕಾಫಿಯ ಗುಣಮಟ್ಟ ಹೆಚ್ಚಿಸುವಲ್ಲಿ ಸಂಶೋಧನೆ ನಡೆಸುತ್ತಿದೆ. ಕಾಫಿ ಬೆಳೆಗಾರರು, ಬ್ಯಾಂಕರ್‌ಗಳು, ತೋಟಗಾರಿಕಾ ತಜ್ಞರು, ಎಸ್ಟೇಟ್ ವ್ಯವಸ್ಥಾಪಕರು, ಮೇಲ್ವಿಚಾರಣಾ ಸಿಬ್ಬಂದಿ ಮತ್ತು ಕಾಫಿ ಮಂಡಳಿ ವಿಸ್ತರಣಾ ಅಧಿಕಾರಿಗಳಿಗೆ ತರಬೇತಿ ವಿಭಾಗವಿದೆ. ಹುರಿಯುವುದು, ಕುದಿಸುವುದು, ಪ್ಯಾಕೇಜಿಂಗ್, ಬಿಲ್ಲರೆ ವ್ಯಾಪಾರ ಮತ್ತು ಗುಣಮಟ್ಟದ ಮೌಲ್ಯಮಾಪನದ ಕುರಿತು ಕಾಫಿ ಶಾಸ್ತ್ರ ತರಬೇತಿ ಕಾರ್ಯಕ್ರಮ ಇದೆ.

ಚಿಟ್ಟಳ್ಳಿಯಲ್ಲಿ ಸಂಶೋಧನಾ ಉಪ ಕೇಂದ್ರ: 1946ರಲ್ಲಿ ಕೊಡಗು ಜಿಲ್ಲೆಯ ಚಿಟ್ಟಳ್ಳಿಯಲ್ಲಿ ಕಾಫಿ ಸಂಶೋಧನಾ ಉಪಕೇಂದ್ರ ಸ್ಥಾಪಿಸಲಾಗಿದೆ. ಈ ಕೇಂದ್ರವು ದೇಶದ ಪ್ರಮುಖ ಕಾಫಿ ಬೆಳೆಯುವ ಪ್ರದೇಶಗಳಲ್ಲಿ ಒಂದಾಗಿದೆ. ಒಟ್ಟು 131 ಹೆಕ್ಟೇರ್ ವಿಸ್ತೀರ್ಣ ಹೊಂದಿರುವ ಕೇಂದ್ರದಲ್ಲಿ 80 ಹೆಕ್ಟೇರ್ ಪ್ರದೇಶದಲ್ಲಿ ಸಂಶೋಧನಾ ಪ್ರಯೋಗ ನಡೆಸಲು ಕಾಫಿ ನೆಡಲಾಗಿದೆ. ವೈಜ್ಞಾನಿಕ ಮತ್ತು ತಾಂತ್ರಿಕ ಸಿಬ್ಬಂದಿ ಒಳಗೊಂಡಿರುವ ಕೇಂದ್ರದಲ್ಲಿ ಕಾಫಿ ಸಂಶೋಧನೆ ನಡೆಸಲು ಸುಸಜ್ಜಿತ ಪ್ರಯೋಗಾಲಯ ಇದೆ.

ದೇಶದ ಕಾಫಿಯ ತವರು ಕರ್ನಾಟಕ: ಕಾಫಿಯಲ್ಲಿ ರೊಬಸ್ಟಾ, ಅರೇಬಿಕಾ, ಲಿಬ್ರಿಕಾ, ಎಕ್ಸೆಲ್ಸಾ, ಟಿಪಿಕಾ, ಗೀಶಾ ಮತ್ತು ಬರ್ಬಾನ್ ವಿಧಗಳಿವೆ. ಕಾಫಿ ಉತ್ಪಾದನೆಯಲ್ಲಿ ಮುಕ್ಕಾಲು ಭಾಗದಷ್ಟು ರೊಬಸ್ಟಾ, ಅರೇಬಿಕಾ ತಳಿಗಳಾಗಿವೆ. ದೇಶದಲ್ಲೇ ಕರ್ನಾಟಕ, ಕೇರಳ, ತಮಿಳುನಾಡಿನಲ್ಲಿ ಅಧಿಕ ಪ್ರಮಾಣದಲ್ಲಿ ಕಾಫಿ ಉತ್ಪಾದಿಸಲಾಗುತ್ತಿದೆ. ಆಂಧ್ರಪ್ರದೇಶ, ಒಡಿಶಾ, ಈಶಾನ್ಯ ರಾಜ್ಯಗಳಲ್ಲಿಯೂ ಬೆಳೆಯಲಾಗುತ್ತಿದೆ. ದೇಶದಲ್ಲೇ ಕರ್ನಾಟಕವು ಅತಿ ಹೆಚ್ಚು ಕಾಫಿ ಉತ್ಪಾದಿಸುವ ರಾಜ್ಯವಾಗಿದೆ. ಚಿಕ್ಕಮಗಳೂರು, ಕೊಡಗು, ಹಾಸನ, ಶಿವಮೊಗ್ಗ ಸೇರಿ ಕರಾವಳಿ ಜಿಲ್ಲೆಗಳ ಕೆಲವು ಪ್ರದೇಶಗಳಲ್ಲಿ ಬೆಳೆಯಲಾಗುತ್ತಿದೆ. ರಾಜ್ಯದಲ್ಲಿ ಬೆಳೆಯುವ ಅರೇಬಿಕಾ ತಳಿಯಲ್ಲಿ ಶೇ.98 ಚಿಕ್ಕಮಗಳೂರಿನಲ್ಲಿ ಉತ್ಪಾದಿಸಲಾಗುತ್ತಿದೆ. ಕೊಡಗಿನಲ್ಲಿ ಶೇ.75 ರೊಬಸ್ಟಾ ತಳಿ ಬೆಳೆಯಲಾಗುತ್ತಿದೆ. ಭಾರತದಲ್ಲಿ ಒಟ್ಟು ಉತ್ಪಾದನೆಯಾಗುವ ಶೇ.71 ಕರ್ನಾಟಕ ಉತ್ಪಾದಿಸುತ್ತಿದೆ. ಕೇರಳ ಶೇ.21 ಮತ್ತು ತಮಿಳುನಾಡು ಶೇ.5 ಉತ್ಪಾದನೆ ಮಾಡುತ್ತಿವೆ. ಅಲ್ಲದೆ, ವಿವಿಧ ಮಾದರಿ ಸ್ಟಾಂಗ್ ಕಾಫಿ ಮಾಡುವವರು ರೊಬಸ್ಟಾ ಕಾಫಿ ಬೀಜ ಬಳಕೆ ಮಾಡುತ್ತಾರೆ. ಅತ್ಯುತ್ತಮ ಸುವಾಸನೆ ಹೊಂದಿರುವ ಅರೇಬಿಕಾ ಕಾಫಿಗೂ ಬೇಡಿಕೆ ಇದೆ. ಭಾರತದಲ್ಲಿ ಉತ್ಪಾದನೆಯಾಗುವ ಒಟ್ಟು ಕಾಫಿಯಲ್ಲಿ ಶೇ.72 ರೊಬಸ್ಟಾ ತಳಿಯಾಗಿದೆ.





ಸಮಗ್ರ ಕಾಫಿ ಅಭಿವೃದ್ಧಿ ಯೋಜನೆಯನ್ನು ಕೇಂದ್ರ ಸರ್ಕಾರ ಅನುಷ್ಠಾನಕ್ಕೆ ತರುತ್ತಿದೆ. ಭಾರತದ ಕಾಫಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿನ ಪ್ರಾಶಸ್ತ್ಯ ಕಲ್ಪಿಸಲು ಮಂಡಳಿ ಹಲವು ಕ್ರಮ ಕೈಗೊಂಡಿದೆ. ಸರ್ಫೆಸಿ ಕಾಯ್ದೆ ಸೇರಿ ವಿವಿಧ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಉದ್ದಿಮೆದಾರರು, ಬೆಳೆಗಾರರು ಮತ್ತು ಬ್ಯಾಂಕ್ ಪ್ರತಿನಿಧಿಗಳೊಂದಿಗೆ ಸಭೆ ಕರೆಯಲಾಗುವುದು.

| ಕೂರ್ಮರಾವ್ ಸಿಇಒ ಮತ್ತು ಕಾರ್ಯದರ್ಶಿ, ಕಾಫಿ ಮಂಡಳಿ ಬೆಂಗಳೂರು

ಮುಖ್ಯಾಂಶಗಳು


- ರಫ್ತಿನಲ್ಲಿ ಶೇ.5, ಉತ್ಪಾದನೆಯಲ್ಲಿ ಶೇ.3.5 ಭಾರತದ ಕಾಫಿ ಪಾಲು
- ದೇಶದಲ್ಲಿ ಒಟ್ಟು 4.90 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ, 4.41 ಲಕ್ಷ ಹಿಡುವಳಿದಾರರು
- 10 ಹೆಕ್ಟೇರ್‌ಗಿಂತ ಕಡಿಮೆ ಭೂಮಿ ಹೊಂದಿರುವ ಶೇ.99 ಬೆಳೆಗಾರರು
- ಅಂದಾಜು 20 ಲಕ್ಷ ಮಂದಿಗೆ ಉದ್ಯೋಗ
- ಅಂಗಾಂಶ ಕೃಷಿ ಮೂಲಕ ಹೊಸ ತಳಿ ಅನ್ವೇಷಣೆ
- ಭಾರತದಲ್ಲಿ ಕೆಫೆ ಸಂಸ್ಕೃತಿಯಿಂದ ಕಾಫಿಗೆ ಬೇಡಿಕೆ
- ಪಶ್ಚಿಮ ಏಷ್ಯಾ, ಜಪಾನ್, ಕೊರಿಯಾದಲ್ಲೂ ಮಾರುಕಟ್ಟೆ ವಿಸ್ತರಣೆ

ಕಾಫಿ ಬೆಳೆಗಾರರಿಗೆ ಆದಾಯ ತೆರಿಗೆ ಕಾಯ್ದೆಯಲ್ಲಿ 'ರೂಲ್ಸ್-7ಬಿ' ವಿನಾಯಿತಿ ನೀಡಬೇಕು. ಕಾಫಿಯನ್ನು ಮೌಲ್ಯವರ್ಧನೆಗೊಳಿಸಿ ಉತ್ಪನ್ನಗಳನ್ನು ಮಾರಾಟ ಮಾಡಿದರೆ ಶೇ.25 ತೆರಿಗೆ ಹಾಕಲಾಗುತ್ತಿದೆ. ಇದರಿಂದ ಹೊರೆಯಾಗುತ್ತಿದೆ. ಸಾಕಷ್ಟು ಬೆಳೆಗಾರರು ಮೌಲ್ಯವರ್ಧನೆ ಮಾಡದೆ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ.

| ಬೋಸ್ ಮಂದಣ್ಣ ಕಾಫಿ ಬೆಳೆಗಾರ

ಭರವಸೆ ಮೂಡಿಸಿದ ಕಪ್ಪು ಬಂಗಾರ

ಕಾಳುಮೆಣಸಿನತ್ತ ಮುಖ ಮಾಡಿದ ರೈತ



ದಿಢೀರ್ ದರ ಕುಸಿತ

ಜಿಲ್ಲೆಯಲ್ಲಿ 2020-21ರಲ್ಲಿ ಕಾಳುಮೆಣಸು ಬೆಳೆಯುವ ಪ್ರದೇಶ 7,323 ಹೆಕ್ಟೇರ್‌ನಷ್ಟಿತ್ತು. ಆದರೆ ಸೊರಗು ರೋಗದ ಕಾರಣ ದರ ದಿಢೀರ್ ಕುಸಿದಿತ್ತು. ಎರಡು ವರ್ಷಗಳಿಂದ ದರ ಕ್ವಿಂಟಾಲ್‌ಗೆ 65 ಸಾವಿರ ರೂ. ಗಡಿ ದಾಟುತ್ತಿದ್ದಂತೆ ರೈತರು ಮತ್ತೆ ಕಾಳುಮೆಣಸಿನತ್ತ ಮುಖ ಮಾಡುತ್ತಿದ್ದಾರೆ.

■ ನವೀನ್ ಬಿಲ್ಲುಣಿ ಶಿವಮೊಗ್ಗ

ಒಂದು ಕಾಲದಲ್ಲಿ ಮಲೆನಾಡು, ಅರೆಮಲೆನಾಡು ಪ್ರದೇಶದಲ್ಲಿ ಅಡಕೆ ಪ್ರಮುಖ ವಾಣಿಜ್ಯ ಬೆಳೆಯಾಗಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಕೀಟಬಾಧೆ, ಕೊಳೆರೋಗ ಮತ್ತಿತರ ಕಾರಣಗಳಿಂದ ಅಡಕೆ ಬೆಳೆಗಾರರು ಹೈರಾಣಾಗಿದ್ದಾರೆ. ಪರ್ಯಾಯ ಬೆಳೆಗಳತ್ತ ಮುಖಮಾಡುವುದು ಅನಿವಾರ್ಯವಾಗಿದ್ದು, ಕಾಳು ಮೆಣಸಿನ ಬೆಳೆ ಇದೀಗ ಹೊಸ ಭರವಸೆ ಮೂಡಿಸಿದೆ. ದರ ಏರಿಕೆ, ಅಂತರ ಬೆಳೆ ಸೇರಿ ನಾನಾ ಕಾರಣಕ್ಕೆ 'ಕಪ್ಪು ಬಂಗಾರ' ಖ್ಯಾತಿಯ ಕಾಳುಮೆಣಸು ಆಶಾಭಾವ ಮೂಡಿಸಿದ್ದು, ಅಡಕೆ ನಡುವೆ ವಾಣಿಜ್ಯ ಬೆಳೆಯಾಗಿ ಕಾಳುಮೆಣಸು ಬೆಳೆಯಲು ರೈತರು ಚಿತ್ತ ಹರಿಸಿದ್ದಾರೆ.

ಶಿವಮೊಗ್ಗ ಜಿಲ್ಲೆಯಲ್ಲಿ 1.40 ಲಕ್ಷಕ್ಕೂ ಅಧಿಕ ಹೆಕ್ಟೇರ್‌ನಲ್ಲಿ ತೋಟಗಾರಿಕೆ ಬೆಳೆಗಳು ಮತ್ತು 1.25 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಬೆಳೆ ಬೆಳೆಯಲಾಗುತ್ತಿದೆ. 1.37 ಲಕ್ಷ ಹೆಕ್ಟೇರ್‌ಗೆ ಅಡಕೆ ಬೆಳೆ ವಿಸ್ತರಿಸಿದೆ. 2023-24ನೇ ಸಾಲಿನಲ್ಲಿ 4,451.41 ಹೆಕ್ಟೇರ್‌ನಷ್ಟಿದ್ದ ಕಾಳುಮೆಣಸು, 2024-2025ನೇ ಸಾಲಿಗೆ 5 ಸಾವಿರ ಹೆಕ್ಟೇರ್ ಗಡಿ ದಾಟಿದೆ. ಒಂದೇ ವರ್ಷ 826.33 ಹೆಕ್ಟೇರ್ ಪ್ರದೇಶ ವಿಸ್ತರಿಸಿದೆ. ಹಾಸನ, ಚಿಕ್ಕಮಗಳೂರು, ಉತ್ತರಕನ್ನಡ, ಕೊಡುಗು ಸೇರಿ ಆಯ್ದ ಜಿಲ್ಲೆಗಳಿಗೆ ಸೀಮಿತವಾಗಿದ್ದ ಕಾಳುಮೆಣಸು ಶಿವಮೊಗ್ಗ ಜಿಲ್ಲೆಯನ್ನೂ ಆವರಿಸಿಕೊಳ್ಳುತ್ತಿದೆ.

ಸಸಿಗಳಿಗೆ ಬೇಡಿಕೆ: ಕಾಳುಮೆಣಸು ಸಸಿಗಳಿಗೆ ಪ್ರಸಕ್ತ ವರ್ಷ ಬೇಡಿಕೆ ಹೆಚ್ಚಾಗಿದೆ. ಇರುವಕ್ಕಿ ಕೆಳದಿ ಶಿವಪ್ಪನಾಯಕ ಕೃಷಿ ಮತ್ತು ತೋಟಗಾರಿಕೆ ವಿವಿಯಲ್ಲಿ ಒಂದು ಲಕ್ಷದಷ್ಟು ಸಸಿಮಡಿ ಮಾಡಿದ್ದು, ಶೇ. 60 ಯಶಸ್ವಿಯಾಗಿದೆ. ಈಗಾಗಲೇ ಬುಕಿಂಗ್ ಆಗಿದ್ದು, ಕಾಲೇಜಿನಲ್ಲೂ ಕ್ಷೇತ್ರ ವಿಸ್ತರಣೆಗೆ ಸಸಿಗಳನ್ನು ಇಟ್ಟುಕೊಂಡು ಉಳಿದವುಗಳನ್ನು ಮಾರಾಟ ಮಾಡಲು ನಿರ್ಧರಿಸಲಾಗಿದೆ. ಶಿವಮೊಗ್ಗ ಕೃಷಿ ವಿಜ್ಞಾನ ಕೇಂದ್ರ, ಶಿವಮೊಗ್ಗ ತೋಟಗಾರಿಕೆ ಇಲಾಖೆ ವ್ಯಾಪ್ತಿಯಲ್ಲಿ ಈ ಬಾರಿ ಕಾಳುಮೆಣಸು ಸಸಿಗಳನ್ನು ಬೆಳೆಸಿಲ್ಲ. ಇನ್ನೂ ಕೆಲವೆಡೆ ಖಾಸಗಿ ನರ್ಸರಿಗಳಲ್ಲೂ ಸಸಿಗಳಿಗೆ ವ್ಯಾಪಕ ಬೇಡಿಕೆ ಇದೆ.

ಸರ್ಕಾರದ ಸಹಾಯಧನ: ರಾಜ್ಯ ಸರ್ಕಾರ ಕಾಳುಮೆಣಸು ಬೆಳೆ ಪ್ರೋತ್ಸಾಹಿಸಲು ತೋಟಗಾರಿಕೆ ಇಲಾಖೆ ಮೂಲಕ ಸಹಾಯಧನ ವಿತರಿಸುತ್ತಿದೆ. ಪ್ರತಿ ಎಕರೆಗೆ 8 ಸಾವಿರ ರೂ.ವರೆಗೂ ಸಹಾಯಧನ ಲಭ್ಯವಿರುವ ಕಾರಣ ರೈತರು ಅಂತರ ಬೆಳೆಯಾಗಿ ಬೆಳೆಯಲು ಮುಂದಾಗಿದ್ದಾರೆ. 6ರಿಂದ 8 ವರ್ಷ ಮೇಲ್ಪಟ್ಟ ಅಡಕೆ ಮರಗಳಿಗೆ ಕಾಳುಮೆಣಸು ಕೃಷಿ ಮಾಡಬಹುದು ಎನ್ನುತ್ತಾರೆ ತೋಟಗಾರಿಕೆ ಇಲಾಖೆ ಅಧಿಕಾರಿಗಳು. ರಾಜ್ಯದಲ್ಲಿ ಶೇ.70 ಬೆಳೆಗಾರರು ಅಡಕೆಯನ್ನು ಏಕ ಬೆಳೆಯನ್ನಾಗಿ ಬೆಳೆಯುತ್ತಿದ್ದಾರೆ. ಬೇಗನೆ ಫಸಲುಬಿ ಕಾಳುಮೆಣಸಿಗೆ ಇತ್ತೀಚಿಗೆ ದರ ಏರಿಕೆ ಆದ ಕಾರಣ ಬೆಳೆಗಾರರು ಹೆಚ್ಚಿನ ಆದಾಯ ಗಳಿಸುತ್ತಿದ್ದಾರೆ. ಸಸಿ ನೆಟ್ಟ ಒಂದೂವರೆ ವರ್ಷದಿಂದ ಫಸಲು ಬಿಡಲು ಆರಂಭವಾಗುತ್ತದೆ. ಕಡಿಮೆ ಅವಧಿಯಲ್ಲಿ ಆದಾಯ ರೈತರ ಕೈಸೇರಲಿದೆ. ಕಾಳುಮೆಣಸು ದರ ಪ್ರತಿ ಕೆಜಿಗೆ 600 ರೂ. ದಾಟಿತ್ತು.



ಜಿಲ್ಲೆಯಲ್ಲಿ ಒಂದು ವರ್ಷದಿಂದ ಕಾಳುಮೆಣಸು ಬೆಳೆಯುವವರ ಸಂಖ್ಯೆ ಹೆಚ್ಚಾಗಿದೆ. ರೈತರು ಆರ್ಥಿಕವಾಗಿ ಸದೃಢರಾಗಲು ಅಡಕೆ ನಡುವೆ ಅಂತರ ಬೆಳೆಯಾಗಿ ಬೆಳೆಯಬಹುದು. ಇದಕ್ಕೆ ರಾಜ್ಯ ಸರ್ಕಾರದಿಂದ ಸಹಾಯಧನ ಲಭ್ಯವಿದೆ.

| ಜಿ.ಸವಿತಾ ಶಿವಮೊಗ್ಗ ತೋಟಗಾರಿಕೆ ಇಲಾಖೆ ಉಪ ನಿರ್ದೇಶಕಿ

ಪ್ರಸಕ್ತ ವರ್ಷ ಒಂದು ಲಕ್ಷ ಕಾಳುಮೆಣಸು ಸಸಿಮಡಿ ಮಾಡಿದ್ದೆವು. ನಮ್ಮ ಹೊಸ ಫಾರ್ಮ್‌ಗೆ ಶೇ.20 ಸಸಿ ಇಟ್ಟುಕೊಂಡು ಉಳಿದಿದ್ದನ್ನು ಮಾರಾಟ ಮಾಡುತ್ತೇವೆ. ಸಾಗರ, ಹೊಸನಗರದಲ್ಲಿ ಮಳೆ ಹೆಚ್ಚಿರುವ ಕಾರಣ ಆಗಸ್ಟ್-ಸೆಪ್ಟೆಂಬರ್‌ನಲ್ಲಿ ಸಸಿ ನೆಡುತ್ತಾರೆ. ಶಿವಮೊಗ್ಗ ಸೇರಿ ಬೇರೆಡೆ ಜೂನ್‌ನಲ್ಲಿ ಸಸಿ ನೆಡುವುದು ಉತ್ತಮ.

| ಸದಾಶಿವ ನಡುಕೇರಿ ಇರುವಕ್ಕಿ ಕೃಷಿ ಮತ್ತು ತೋಟಗಾರಿಕೆ ವಿವಿ ಸಹಾಯಕ ಪ್ರಾಧ್ಯಾಪಕ

ತೆಂಗು ಬೆಳೆಗಾರರಿಗೆ ಆತಂಕ ಬೇಡ: ಸಚಿವ

ಹಾಸನ: ತೆಂಗು ಬೆಳೆಗಳಿಗೆ ಬಿಳಿ ರೋಗ ತಗಲುತ್ತಿರುವ ಹಿನ್ನೆಲೆ ವಿಜ್ಞಾನಿಗಳ ತಂಡ ಹಾಸನ ಮತ್ತು ತುಮಕೂರಿಗೆ ಭೇಟಿ ನೀಡಿದ್ದಾರೆ. ಆದ್ದರಿಂದ ತೆಂಗು ಬೆಳೆಗಾರರು ಆತಂಕ ಪಡುವ ಅಗತ್ಯವಿಲ್ಲ ಎಂದು ಕೃಷಿ ಸಚಿವ ಎನ್. ಚೆಲುವ ರಾಯಸ್ವಾಮಿ ತಿಳಿಸಿದರು.

ಅರಸೀಕೆರೆ ತಾಲೂಕಿನ ಹಾರನಹಳ್ಳಿ ಕೋಡಿಮಠಕ್ಕೆ ಭೇಟಿ ನೀಡಿ ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಮಹಾಸ್ವಾಮಿಗಳ ಆಶೀರ್ವಾದ ಪಡೆದು ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ರಾಜ್ಯದಲ್ಲಿ ಇತ್ತೀಚೆಗೆ ತೆಂಗು ಬೆಳೆಗಳಿಗೆ ಬಿಳಿ ರೋಗಗಳು ತಗಲಿತ್ತು. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಇದರ ಬಗ್ಗೆ ಪರಿಶೀಲಿಸಲು ವಿಜ್ಞಾನಿಗಳ ತಂಡ ತುಮಕೂರು ಮತ್ತು ಹಾಸನ ಜಿಲ್ಲೆಗೆ ಭೇಟಿ ನೀಡಿದೆ. ಗಾಳಿಯ ವಾತಾವರಣದಿಂದ ತೆಂಗಿನ ಮರಗಳಿಗೆ ರೋಗ ತಗಲಿದ್ದು, ಇದರಿಂದ ರೈತರು ತೀರಾ ಆತಂಕ ಪಡುವ ಅಗತ್ಯವಿಲ್ಲ ಎಂದು ತಿಳಿಸಿದರು.

ರಾಜ್ಯದಲ್ಲಿ ಕಾವೇರಿ ಆರತಿ ಕುರಿತು ಕೆಲವರಿಂದ ಅಪಸ್ವರ ಬಂದಿದೆ. ಆದರೆ, ಧಾರ್ಮಿಕ ಮತ್ತು ಪ್ರವಾಸಿಗರ ಆಕರ್ಷಣೆ ಹಿತದೃಷ್ಟಿಯಿಂದ ಅದನ್ನು ಜಾರಿಗೆ ತರಲಾಗುವುದು. ಕೋರ್ಟು ಕೆಲವು ನಿಗದಿತ ಮಾನದಂಡ ಹೇಳಿದ್ದು, ಕಳೆದ ಎರಡು ವರ್ಷಗಳಿಂದ ರೈತರಿಗೆ ತೀರಾ ತೊಂದರೆ ಆಗದಂತೆ ರಾಜ್ಯ ಸರ್ಕಾರ ಕಾರ್ಯ ನಿರ್ವಹಿಸಿದೆ.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
• VIJAYAVANI » BENGALURU
ಸೋಮವಾರ 30 ಜೂನ್ 2025
30 JUNE 2025
ಸಮಸ್ತ ಕರ್ನಾಟಕ

UNIVERSITY LIBRARY
BANGALORE
B.K.V. CAMPUS
7

ವಿ ರೈತ ಮಿತ್ರ

ಶುಂಠಿ ಬೆಳೆಯಲ್ಲಿ ಗಡ್ಡೆಗಳು ಕೊಳೆಯುತ್ತಿದ್ದು, ಇದನ್ನು ನಿರ್ವಹಿಸುವುದು ಹೇಗೆ?

।ಪದ್ಮಜಾ ಪಾಟೀಲ್ ಕಲಬುರಗಿ

ಶುಂಠಿ ಬೆಳೆಯಲ್ಲಿ ಗಡ್ಡೆ ಕೊಳೆ ರೋಗಕ್ಕೆ ತುತ್ತಾದ ಗಿಡದ ಎಲೆಗಳ ತುದಿ ಭಾಗವು ಹಳದಿ ಬಣ್ಣಕ್ಕೆ ತಿರುಗಿ ಕ್ರಮೇಣ ಪೂರ್ತಿ ಹಳದಿಯಾಗಿ ಗಿಡ ಬಾಡಿ ಒಣಗುತ್ತದೆ. ಗಿಡದ ಬುಡ ಭಾಗವು ತೇವಾಂಶಯುಕ್ತ ಕಂದು ಬಣ್ಣದಿಂದ ಕೂಡಿದ್ದು, ನಂತರ ಕೊಳೆಯುತ್ತವೆ.



ನಿರ್ವಹಣೆ: ಮೊದಲಿಗೆ ರೋಗಗ್ರಸ್ಥ ಗಡ್ಡೆಗಳನ್ನು ತೆಗೆದು ಹಾಕಬೇಕು. ನಂತರ ಪ್ರತಿ ಲೀಟರ್ ನೀರಿಗೆ ಕಾಪರ್ ಆಕ್ಸಿಕ್ಲೋರೈಡ್ 50 ಡಬ್ಲ್ಯು.ಪಿ 3.0 ಗ್ರಾಂ ನಂತೆ ಬೆರೆಸಿ ರೋಗ ಕಂಡು ಬಂದ ಮಡಿಗೆ ಹಾಗೂ ಸುತ್ತ ಮುತ್ತಲಿನ ಮಡಿಗಳಿಗೆ ಸುರಿಯಬೇಕು. ಮುಂದಿನ ಬೆಳೆಗೆ ಗಡ್ಡೆ ಕೊಳೆ ರೋಗದ ಹಾನಿ ತಡೆಗಟ್ಟಲು ರೋಗರಹಿತ ಗಡ್ಡೆಗಳನ್ನು ಬಳಸಬೇಕು. ಪ್ರತಿ ಲೀಟರ್ ನೀರಿಗೆ ಮೆಟಲಾಕ್ಸಲ್ ಎಂ. ಝಡ್ 72 ಡಬ್ಲ್ಯು.ಪಿ 6.0 ಗ್ರಾಂ ನಷ್ಟು ಬೆರೆಸಿ ನಾಟಿ ಮಾಡುವ ಮೊದಲು ಬೀಜದ ಗಡ್ಡೆಗಳನ್ನು 30 ನಿಮಿಷಗಳ ಕಾಲ ಈ ದ್ರಾವಣದಲ್ಲಿ ನೆನೆಸಿ ನಂತರ ನಾಟಿ ಮಾಡಬೇಕು. ನಾಟಿ ಮಾಡುವ ಸಮಯದಲ್ಲಿ ಪ್ರತಿ ಎಕರೆಗೆ 1.0 ಕ್ವಿಂಟಾಲ್ ಬೇವಿನಹಿಂಡಿಗೆ 1.0 ಕಿ.ಗ್ರಾಂ ಟ್ರೈಕೋಡರ್ಮಾ ಜೈವಿಕ ಶಿಲೀಂಧ್ರನಾಶಕ ಬೆರೆಸುವುದರಿಂದ ರೋಗ ಹರಡುವಿಕೆ ತಡೆಯಬಹುದು.

।ಡಾ. ಕೆ.ಪಲ್ಲವಿ ಸಸ್ಯ ಸಂರಕ್ಷಣಾ ತಜ್ಞರು

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲ್ಲಿನ ತಜ್ಞರು ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ

Prajavani Pg.04

ಖರ್ಜೂರ

ಪಿಟಿಐ ಚಿತ್ರ



ರಾಜಸ್ಥಾನದ ಬಿಕನೇರ್‌ನಲ್ಲಿ ಭಾನುವಾರ ಮಾರಾಟಕ್ಕೆ ಇರಿಸಿದ್ದ ಖರ್ಜೂರ

ಶುಭಾಂಶು ಬಾಹ್ಯಾಕಾಶ ಪ್ರಯೋಗಕ್ಕೆ ಧಾರವಾಡ ಕೃಷಿ ವಿವಿ ಸಾಥ್

ಅಂತರಿಕ್ಷದಲ್ಲಿ ಬೀಜ ಬಿತ್ತನೆ



ವಸೀಮ ಭಾವಿಮನಿ ಧಾರವಾಡ

ಅಮೆರಿಕದ ಫ್ಲೋರಿಡಾದಲ್ಲಿರುವ ನಾಸಾದ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಉಡಾವಣೆಯಾದ ಆಕ್ಸಿಯಮ್ -4 ಗುರುವಾರ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ ತಲುಪಿದೆ. ರಾಕೇಶ್ ಶರ್ಮಾ ಬಳಿಕ 41 ವರ್ಷಗಳ ನಂತರ ಗಗನ ಯಾನ ಕೈಗೊಂಡಿರುವ ಶುಭಾಂಶು ಶುಕ್ಲಾ ಈಗ ಭಾರತೀಯರೆಲ್ಲರ ಗಮನ ಸೆಳೆದಿದ್ದಾರೆ. ಅಂತರಿಕ್ಷ ನಿಲ್ದಾಣದಿಂದಲೇ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಮಾತುಕತೆ ನಡೆಸಿ ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಅಂದ ಹಾಗೆ ಶುಕ್ಲಾ 14 ದಿನಗಳ ತಮ್ಮ ಬಾಹ್ಯಾಕಾಶ ವಾಸದ ವೇಳೆ ಹಲವು ಪ್ರಯೋಗಗಳನ್ನು ಮಾಡಲಿದ್ದಾರೆ. ಈಗ ಅವರು ಕರ್ನಾಟಕದಿಂದ ಕಳುಹಿಸಿರುವ ವಿವಿಧ ಬಗೆಯ ಕಾಳುಗಳಿಗೆ

ತಲಾ 24 ಗ್ರಾಂ ಮೆಂತ್ಯೆ, ಹೆಸರುಕಾಳು ರವಾನೆ

ಅಮೆರಿಕದ ನಾಸಾ ಕೇಂದ್ರಕ್ಕೆ ಧಾರವಾಡದ ಇಬ್ಬರು ವಿಜ್ಞಾನಿಗಳು ಜೂನ್ 8ರಿಂದ 11ರ ಮಧ್ಯೆ ಖುದ್ದಾಗಿ ಹೋಗಿ 24 ಗ್ರಾಂ ಮೆಂತ್ಯೆ ಹಾಗೂ 24 ಗ್ರಾಂ ಹೆಸರು ಕಾಳು ಕೊಟ್ಟಿದ್ದಾರೆ. 4 ಗ್ರಾಂನ ಒಂದು ಕಂಟೇನರ್ ನಂತೆ , ಪ್ರತ್ಯೇಕವಾಗಿ 6 ಕಂಟೇನರ್‌ಗಳಲ್ಲಿ ಈ ಕಾಳುಗಳನ್ನು ಕಳಿಸಲಾಗಿದೆ.





ಅಂತರಿಕ್ಷಕ್ಕೆ ತೆರಳಿರುವ ಭಾರತೀಯ ಗಗನ ಯಾತ್ರಿ ಶುಭಾಶು ಶುಕ್ಲಾ ಅವರು ತಂದ ದೊಂದಿಗೆ, ಅಂತರಿಕ್ಷಕ್ಕೆ ಧಾರವಾಡದ ವಿಜ್ಞಾನಿಗಳ ಕೊಡುಗೆ ಏನಿದೆ ಎಂದು ಬರೆದುಕೊಂಡಿರುವ ಮಾಹಿತಿ.

ನೀರುಣಿಸುತ್ತಿದ್ದಾರೆ. ಆದರಲ್ಲೂ ಧಾರವಾಡ ವಿವಿ ಕಳುಹಿಸಿರುವ ಹಸಿರು ಕಾಳು ಮತ್ತು ಮೆಂತ್ಯೆ ಅವರ ಪ್ರಯೋಗದಲ್ಲಿ ಮಹತ್ವದ್ದಾಗಿದೆ. ಬೆಂಗಳೂರು ಭಾರತೀಯ ವಿಜ್ಞಾನ ಸಂಸ್ಥೆಯ ಎರಡು, ಧಾರವಾಡ ಕೃಷಿ ವಿವಿಗೆ ಸಂಬಂಧಿಸಿದ ಹಸಿರು ಕಾಳು ಮತ್ತು ಮೆಂತೆ ಕಾಳು, ಬೆಂಗಳೂರಿನ ಬ್ರಿಕ್ ಇನ್‌ಸ್ಟೆಮ್ ಸಂಸ್ಥೆಯದ್ದು ಸೇರಿ ದೇಶದಿಂದ ರವಾನೆಯಾಗಿರುವ 7 ಆಹಾರ ವಸ್ತುಗಳ ಮೇಲೆ ಶುಭಾಂಶು ಅಂತರಿಕ್ಷದಲ್ಲಿ ಪ್ರಯೋಗ ನಡೆಸಲಿದ್ದಾರೆ.

ಅಂತರಿಕ್ಷ ನಿಲ್ದಾಣದಲ್ಲಿ ಬೀಜ ಬಿತ್ತನೆ

ಧಾರವಾಡದ ಕೃಷಿ ವಿಶ್ವವಿದ್ಯಾಲಯ ಕೃಷಿಯಲ್ಲಿನ ವಿವಿಧ ಆವಿಷ್ಕಾರಗಳಿಗೆ ಮೊದಲಿನಿಂದಲೂ ಪ್ರಸಿದ್ಧ. ಇಷ್ಟು ದಿನ ರೈತರ ಹೊಲಗದ್ದೆಗಳಲ್ಲಿ ಬಿತ್ತನೆಗೆ ಮಾತ್ರವೇ ಸೀಮಿತವಾಗಿದ್ದ ಕೃಷಿ ವಿಶ್ವವಿದ್ಯಾಲಯದ ಕಾಳುಗಳನ್ನು ಈಗ ಶೂನ್ಯ ಗುರುತ್ವಾಕರ್ಷಣ ಹೊಂದಿದ ಅಂತಾರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರದಲ್ಲಿ ಬೆಳೆಯುವ ಪ್ರಯತ್ನ ಮಾಡಲಾಗುತ್ತಿದೆ. ಹಸಿರು ಕಾಳು ಮತ್ತು ಮೆಂತ್ಯೆ ಭಾರತೀಯರ ಪಾಲಿಗೆ ಪ್ರಧಾನ ಆಹಾರ ಬೆಳೆಗಳು ಮಾತ್ರವಲ್ಲ ಆರೋಗ್ಯದ ದೃಷ್ಟಿಯಿಂದಲೂ ಹೆಚ್ಚಿನ ಮಹತ್ವ ಹೊಂದಿವೆ. ಇಸ್ರೋ, ಧಾರವಾಡದ ಕೃಷಿ ವಿವಿ ಹಾಗೂ ಧಾರವಾಡ ಐಐಟಿ ಸಹಯೋಗದೊಂದಿಗೆ ಅಂತರಿಕ್ಷದಲ್ಲಿ ಬೆಳೆದ ಕಾಳುಗಳನ್ನು ಪರೀಕ್ಷಿಸಿ ಅವುಗಳಲ್ಲಿ ಆಗಿರುವ ಬದಲಾವಣೆಗಳನ್ನು ಗಮನಿಸಲಾಗುತ್ತದೆ. ಇದು ಮುಂದೆ ದೊಡ್ಡ ಮಟ್ಟದ ಸಂಶೋಧನೆಗೆ ನಾಂದಿ ಹಾಡುವ ನಿರೀಕ್ಷೆ ಇದೆ.

ಪ್ರಯೋಗ ಹೇಗೆ?

ಶುಭಾಂಶು ಶುಕ್ಲಾ ರಾಜ್ಯದಿಂದ ಕಳುಹಿಸಿರುವ ಒಣಬೀಜಗಳಿಗೆ ನೀರುಣಿಸಿ 2ರಿಂದ 4 ದಿನಗಳಲ್ಲಿ ಮೊಳಕೆಯೊಡೆಯವಂತೆ ಮಾಡುತ್ತಾರೆ. ನಂತರ, ಈ ಬೀಜಗಳನ್ನು ಫ್ರೀಜ್ ಮಾಡಿ ಭೂಮಿಗೆ ಹಿಂತಿರುಗಿಸುವ ಮೊದಲು ನಿಲ್ದಾಣದಲ್ಲಿ ಸಂರಕ್ಷಿಸಲಾಗುತ್ತದೆ. ಅವುಗಳು ಹಿಂತಿರುಗಿದ ನಂತರ, ಕೃಷಿ ವಿವಿಯಲ್ಲಿ ಮೊಳಕೆಯ ಪ್ರಮಾಣವನ್ನು ಅವುಗಳ ಪೋಷಕಾಂಶ ಗುಣಮಟ್ಟವನ್ನು ಫೈಟೊ ಹಾರ್ಮೋನ್ ಡೈನಾಮಿಕ್ಸ್‌ನಲ್ಲಿನ ಬದಲಾವಣೆ ಗಳು ಮತ್ತು ಬಾಹ್ಯಾಕಾಶ ಪರಿಸ್ಥಿತಿಗಳಿಗೆ ಹೊಂದು ಕೊಳ್ಳುವ ಕುರಿತು ನಾವು ವಿಶ್ಲೇಷಿಸುತ್ತೇವೆ ಎನ್ನುತ್ತಾರೆ ಧಾರವಾಡ ವಿವಿಯ ಜೈವಿಕ ತಂತ್ರಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕ ಮತ್ತು ಯೋಜನೆಯ ಪ್ರಧಾನ ಅಧಿಕಾರಿ ಡಾ. ರವಿಕುಮಾರ್ ಹೊಸಮನಿ.

ಮೊಳಕೆಯೊಡೆದ ಬೀಜಗಳು ಪೌಷ್ಟಿಕವಾಗಿರುತ್ತವೆ ಎಂದು ನಮಗೆ ಗೊತ್ತು. ಹೆಸರುಕಾಳು ಮತ್ತು ಮೆಂತ್ಯೆ ಅರೆ-ಶುಷ್ಕ ಪರಿಸ್ಥಿತಿಗಳಲ್ಲಿ ಬೆಳೆಯುತ್ತದೆ. ಇದು ಬಾಹ್ಯಾಕಾಶ ಕೃಷಿಗೆ ಸೂಕ್ತವಾಗಿದೆ. ಮುಂದೆ ಗಗನಯಾನಿಗಳ ಸೇವನೆಗೆ ಇದನ್ನು ಬಳಸಬಹುದೇ ಎಂದು ತಿಳಿಯುವುದು ನಮ್ಮ ಸಂಶೋಧನೆಯ ಉದ್ದೇಶ ಎನ್ನುತ್ತಾರೆ ಅವರು.

ಹೆಸರುಕಾಳು ಹಾಗೂ ಮೆಂತ್ಯ ಬೀಜಗಳನ್ನು ಅಂತಾರಾಷ್ಟ್ರೀಯ ನಿಲ್ದಾಣಕ್ಕೆ ಕಳುಹಿಸಿರುವುದು ಧಾರವಾಡ ಕೃಷಿ ವಿವಿಗೆ ಹೆಮ್ಮೆಯ ವಿಚಾರವಾಗಿದೆ. ಅಲ್ಲಿಂದ ಮೊಳಕೆಯೊಡೆದ ಈ ಕಾಳುಗಳು ಮುಂದಿನ ಎರಡು ವಾರಗಳಲ್ಲಿ ಧಾರವಾಡದ ಕೃಷಿ ವಿವಿಗೆ ಬರುವ ನಿರೀಕ್ಷೆಯಿದೆ. ಅವು ಬಂದ ನಂತರ ಪೌಷ್ಟಿಕಾಂಶ ಮತ್ತು ಶಾರೀರಿಕ ನೆರವಿಗೆ ಸಂಬಂಧಿಸಿದ ವಿವರವಾದ ಮೌಲ್ಯಮಾಪನಗಳನ್ನು ಮಾಡ ಬಹುದು. ಗಗನಯಾತ್ರೆಯಲ್ಲಿ ಯಾನಿಗಳು ಈ ಕಾಳು ಉಪಯೋಗ ಮಾಡಬಹುದೇ ಎಂದು ಪರೀಕ್ಷೆ ಮಾಡಲಾಗುತ್ತದೆ. ಈ ಯೋಜನೆಯನ್ನು ಐಐಟಿ-ಧಾರವಾಡದ ಅಸೋಸಿಯೇಟ್ ಪ್ರೊಫೆಸರ್ ಡಾ. ಸುಧೀರ್ ಸಿದ್ದಾಪುರರೆಡ್ಡಿ ಅವರ ಸಹಯೋಗದೊಂದಿಗೆ ನಡೆಸಲಾಗುತ್ತಿದೆ.

-ಡಾ. ಪಿ.ಎಲ್. ಪಾಟೀಲ್,
ಧಾರವಾಡ ಕೃಷಿ ವಿವಿ ಕುಲಪತಿ

---

41 ವರ್ಷಗಳ ನಂತರ ಬಾಹ್ಯಾಕಾಶಕ್ಕೆ ಭಾರತೀಯ ಗಗನಯಾನಿ ತೆರಳಿರುವುದಕ್ಕೆ ನಾವೆಲ್ಲರೂ ಹೆಮ್ಮೆಪಡುತ್ತೇವೆ. ಈ ಮಿಷನ್‌ನಲ್ಲಿ ನನ್ನ ಲೋಕಸಭಾ ಕ್ಷೇತ್ರದ ಕೊಡುಗೆಯು ಇದೆ. ಆಕ್ಸಿಯಮ್ ಮಿಷನ್ 4ನಲ್ಲಿ ನಮ್ಮ ಐಐಟಿ ಧಾರವಾಡ ಮತ್ತು ಕೃಷಿ ವಿಶ್ವವಿದ್ಯಾಲಯ ಸಹಯೋಗವನ್ನು ಹೊಂದಿದೆ. ಬಾಹ್ಯಾಕಾಶ ಕೃಷಿ ಮತ್ತು ಗಗನಯಾತ್ರಿಗಳ ಪೋಷಣೆ ಮೇಲಿನ ಅಧ್ಯಯನಕ್ಕೆ ವಿದ್ಯಾಕಾಶಿ ಧಾರವಾಡದ ಅನನ್ಯ ಕೊಡುಗೆ ಸಲ್ಲುತ್ತಿದೆ. ಇದು ನಮಗೆ ಹೆಮ್ಮೆಯ ವಿಷಯ.

-ಪ್ರಲ್ಹಾದ ಜೋಶಿ, ಕೇಂದ್ರ ಸಚಿವರು

Out on expedition, Arunachal forest team discovers new flowering plant

PRASANTA MAZUMDAR @ Guwahati

FOREST officials in Arunachal Pradesh have discovered a new flowering plant 'Begonia nyishiorum', endemic to the state's East Kameng district.

An article on the discovery was published on June 23 in the journal "Novon". The discovery was made during an expedition, "Documentation of rare flora and fauna of East Kameng district," conducted by the Seppa forest division from July last year to January this year.

Divisional Forest Officer, Seppa, Abhinav Kumar told this newspaper that 'Begonia nyishiorum' remained a hidden secret all these years. "Officers and staff members of the forest division and local Nyishi residents blazed fresh trekking lines by cutting through dense, untouched vegetation and camped in sub-zero conditions at elevations above 2 600 metres, where several slopes lay under early winter snow," said Kumar, also the co-lead author. "Amid this arduous survey to document the district's flora and fauna, the team noticed a cluster of begonias with unmistakable crimson fringed petioles—sparking detailed collection, photography, and subsequent taxonomic work," said Kumar.



Begonia nyishiorum grows in moist, shaded mountain slopes between 1,500 and 3,000 metres above sea level and is instantly recognisable by the dense crimson, fringed scales that sheath its light green petioles—an indumentum previously unseen in any Asian begonia.

"Each new species we document is another reminder that vast tracts of Arunachal's forest remain scientifically unexplored," said Kumar, adding, "Begonia nyishiorum spotlights why the Eastern Himalaya must be treated as a global priority for both research and conservation."

Talking about why this discovery matters, Kumar said currently known only from two forest sites in East Kameng, the species' petiole 'fringe' sets it apart from over 2,150 accepted begonias worldwide. He said the epithet nyishiorum honours the Nyishi community whose traditional stewardship protects these high elevation forests.

IndianExpress Pg.08

'Turmeric Board will boost farmer income with new markets opening'

The Hindu Bureau
HYDERABAD

Fulfilling a 40-year-old dream and the promise made by Prime Minister Narendra Modi, Union Home Minister Amit Shah inaugurated the headquarters of the National Turmeric Board in Nizamabad on Sunday.

Mr. Shah said that with the establishment of the Board, within three to four years, turmeric from Nizamabad will reach most countries around the world. Farmers will no longer have to rely on middlemen as the Board will establish the entire value chain – packaging, branding, marketing and export.

The Minister said turmeric is antiviral, anti-cancer, and anti-inflammatory, and is a wonder drug. Moreover, the Indian turmeric with high curcumin content is much sought after. "Now, we've also begun GI tag certification and marketing for organic turmeric. Government of India has set a target of $1 billion in turmeric exports by 2030." He further said farmers will also be trained in best practices to meet export standards and the Board will work on skill development and training. He said in 2025, turmeric farmers received a rate of ₹18,000 to ₹19,000 per quintal. In the next three years, marketing initiatives will help farmers earn ₹6,000 to ₹7,000 more per quintal.



Amit Shah at a turmeric stall during the inauguration of the National Turmeric Board Headquarters. MOHAMMED ALEEMUDDIN

Mr. Shah said that along with the Turmeric Board, branch offices of Bharat Organic Cooperative Ltd. and Bharat Cooperative Exports Ltd. will be opened in Nizamabad to boost turmeric exports.

Telangana Agriculture Minister Tummala Nageshwar Rao thanked the Centre for responding to the long-pending demand of farmers.

Union Coal Minister G. Kishan Reddy, Union Minister of State for Home Bandi Sanjay Kumar, K. Laxman and D. Arvind, MPs, and several other party leaders were present.

The Hindu Pg.07